Dec 143
7-2-2

Regd No BG 155

2-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕೇರಳದಲ್ಲಿ ರಾಜದ ಪೂರ್ತಿ ಚಳುವಳಿ

ಸತ್ಯ, ಅಹಿಂಸೆ

★

ನವದೆಹಲಿ— ಅಕ್ಟೋಬರು 2 ರಂದು ಎಲ್ಲಾ ಪ್ರಜೆಗಳೂ ಸತ್ಯ, ಅಹಿಂಸೆ ಆಚರಿಸುವ, ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯ ಭಂಗತರದಿರುವಂತೆ, ಜಾತಿ ಕೋಮು ನಿರುದ್ಧ ಹೋರಾಡುವಂತೆ ಪ್ರತಿಜ್ಞೆ ಮಾಡಲು ಆಹ್ವಾನಿಸಲ್ಪಡುವರು

"ಸತ್ಯವಾದಿ"ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೇರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ತತ್ಕೃಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಎಲ್. ಐ. ಸಿ.

ಪ್ರಸ್ತುತ ವರ್ಷದ ಸೆಪ್ಟಂಬರು 1 ಕ್ಕೆ ಜೀವವಿಮಾ ಕಾರ್ಪೊರೇಷ ತನ್ನ ಹದಿ ಮೂರು ವರ್ಷಗಳನ್ನು ಮುಗಿಸಲಿದೆ. ಅಲ್ಪ ಅವಧಿಯಲ್ಲೂ ಸಹಾ ಈ ಸಂಸ್ಥೆ ರಾಷ್ಟ್ರದ ಮೂಲೆಮೂಲೆಗಳಲ್ಲಿ ಹರಡಿದೆ. ದೇಶದ ಜನರಲ್ಲಿ ಉಳಿತಾಯಮಾಡುವ ವಾಡಿಕೆ ಬೆಳೆಸುವದರ ಜೊತೆಗೆ ಕಷ್ಟಕಾಲದಲ್ಲಿ ನೆರವಾಗುವ ಸಂಸ್ಥೆಯಾಗಿದೆ. ಇಷ್ಟೇ ಅಲ್ಲದೆ ದೇಶದ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರಕ್ಕೆ ಬೇಕಾದ ಹಣಕಾಸಿನ ನೆರವು ನೀಡುತ್ತಿದೆ. – ಪ್ರಸ್ತು ವರ್ಷದ ಮಾರ್ಚಿ 31 ರ ವೇಳೆಗೆ (ಪಾಕಿಸ್ಥಾನ ಬಿಟ್ಟು) ಸುಮಾರು 6129 ಕೋಟಿ ರೂ. ಗಳಷ್ಟು ಜೀವವಿಮಾ ವ್ಯಾಪಾರವನ್ನು ಈ ಸಂಸ್ಥೆ ನಡೆಸಿದೆ. – 52, 007 ಮಂದಿಗೆ ಉದ್ಯೋಗಾವಕಾಶ ಕಲ್ಪಿಸಿದೆ. – ಈ ಸಂಸ್ಥೆಯ ಸುಮಾರು 36 ವಿಭಾಗ ಕಚೇರಿಗಳು, 414 ಶಾಖೆಗಳು, 135 ಉಪಕಚೇರಿಗಳು ಹಾಗೂ 152 ಅಭಿವೃದ್ಧಿ ಕೇಂದ್ರಗಳು ದೇಶದಲ್ಲಿ ಕೆಲಸಮಾಡುತ್ತಿವೆ.

★

ಎಲೆಕ್ಟ್ರಾನಿಕ್ ಕೈ ಗಡಿಯಾರ

ನವದೆಹಲಿ— ಸ್ವಿಜ್ಜರ್‌ಲೆಂಡಿನಲ್ಲಿ ಪ್ರಪ್ರಥಮವಾಗಿ ಎಲೆಕ್ಟ್ರಾನಿಕ್ ಕೈಗಡಿಯಾರ ತಾರಿಸಲಾಗಿದ್ದು 1 ಕ್ಕೆ ರೂ. 3000 ದಂತೆ ಮಾರಾಟವಾಗುತ್ತಿದೆ.

★

ಹಡಗುಗಳನ್ನು ಕೊಳ್ಳಲಾಗುತ್ತೆ

ಬೊಂಬಾಯಿ— ಭಾರತವು ಜರ್ಮನಿಯಪಬ್ಲಿಕ್‌ನಿಂದ 6 ಹಡಗುಗಳನ್ನು ಒಟ್ಟು ರೂ 25 ಕೋಟಿಗೆ ಕೊಳ್ಳಲಿದೆ.

★

ಸಂಸ್ಕೃತ ದಿನ

ಮೇಲುಕೋಟೆ— ಇಲ್ಲಿ ನಿನ್ನೆ ಸಂಸ್ಕೃತ ದಿನ ಆಚರಿಸಲಾಯಿತು.

ರಾಜ್ಯಾದ್ಯಂತ ಸತ್ಯಾಗ್ರಹ

ತ್ರಿವೇಂದ್ರಂ— ಕೇರಳ ರಾಜ್ಯದಲ್ಲಿ ಸಂಯುಕ್ತ ರಂಗ ಸರಕಾರ ಮಾಡುತ್ತಿರುವ ತಪ್ಪು ಕಾರ್ಯಗಳನ್ನು ಪ್ರಕಾಶ ಪಡಿಸಲು ತಾ || 4 ರಂದು ರಾಜ್ಯಾದ್ಯಂತ ಸತ್ಯಾಗ್ರಹ ನಡೆಸಲು ಪ್ರದೇಶ ಕಾಂಗ್ರೆಸ್ ಸಮಿತಿ ನಿರ್ಧರಿಸಿದೆ.

★

ಎಚ್ಚರಿಕೆ ಮಾತು

ಬೆಂಗಳೂರು— ವಿದ್ಯುದ್ದರ ಹೆಚ್ಚಿಸಿರುವುದನ್ನು ಎಲೆಕ್ಟ್ರಿಸಿಟಿ ಬೋರ್ಡು ವಾಪಸ್ಸು ತೆಗೆದುಕೊಳ್ಳದಿದ್ದರೆ, ತಾವು ರೈತರಿಗೆ ಭೂಕಂದಾಯ ಕೊಡದಿರಲು ಕರೆಕೊಡುವದಾಗಿ ಶಾಸನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಶಿವಪ್ಪನವರು ಹೇಳಿದರು.

★

ಹೌಸ್ ಸರ್ಜರ ನಿಯೋಗ

ಬೆಂಗಳೂರು— ಎಲ್ಲಾ ಮೆಡಿಕಲ್ ಕಾಲೇಜುಗಳ ಹೌಸ್ ಸರ್ಜ ನಿಯೋಗವು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು.

★

ಮುಖ್ಯಮಂತ್ರಿಗಳ ಆಶಯ

ಬೆಂಗಳೂರು— ರಾಷ್ಟ್ರೀಕರಣಗೊಂಡ ಬ್ಯಾಂಕುಗಳಿಂದ ಹೆಚ್ಚು ಸಹಾಯ ದೊರೆಯಬಹುದೆಂಬ ಆಶಯವನ್ನು ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳು ಹೇಳಿದರು.

★

ಪಾತ್ರ ವಿವರಿಸಬೇಕು

ನವದೆಹಲಿ— ಕಾಂಗ್ರೆಸ್-ಸಾರ್ಟಿಯು ಪ್ರಧಾನಿಯರ ಮತ್ತು ಪಾರ್ಟಿ ಅಧ್ಯಕ್ಷರ ಪಾತ್ರವನ್ನು ವಿವರಿಸುವಂತೆ ಕಾರ್ಯದರ್ಶಿ ಶ್ರೀ ಸಿದ್ದೀಕರು ಹೇಳಿದರು.

★ಹುಬ್ಬಳ್ಳಿ— ಹೌಸ್ ಸರ್ಜನ್ನರ ಮುಷ್ಕರದ 11 ನೇ ದಿನವಾದ ನಿನ್ನೆ 24 ಗಂಟೆ ಕಾಲ ಇಬ್ಬರು ಪುರು ಐವರು ಸ್ತ್ರೀ ಡಾಕ್ಟರುಗಳು ಉಪವಾಸ ಕೈಗೊಂಡರು.

ಶಾಸನ ಸಭೆಯಲ್ಲಿ ಗೊಂದಲ

ಹೈದರಾಬಾದು— ಆಂಧ್ರಪ್ರದೇಶ ಶಾಸನ ಸಭೆಯಲಿ, ಈಚೆಗೆ ಬಂಧನದಿಂದ ಬಿಡುಗಡೆಯಾದ ತೆಲಂಗಾಣ ನಾಯಕರು ಒಟ್ಟಾಗಿ ಕೂತು " ಜೈ ತೆಲಂಗಾಣಾ " ಎಂದು ಘೋಷಿಸುತ್ತಾ ತಮ್ಮ ಮಾತನ್ನು ಕೇಳಲು ಒತ್ತಾಯ ಮಾಡಿದರು – ಒಂದು ಗಂಟೆ ನಂತರ ಕೇಳುವುದಾಗಿ ಸ್ಪೀಕರರು ಹೇಳಿದ್ದನ್ನು ಒಪ್ಪಲಿಲ್ಲ – 90 ನಿಮಿಷಗಳ ಕಾಲ ಶಾಸನಸಭಾ ಕಾರ್ಯಕ್ರಮ ಸ್ಥಗಿಂಡು ಮಾಡಲಾಗಿತ್ತು.

ಚಳವಳಿ ಹೊಡೆಲಾಗುತ್ತೆ

ಲೂಧಿಯಾನ— ಹಿಂಡೀಘರ ಮತ್ತಿತರ ಪಂಜಾಬಿ ಮಾತನಾಡುವ ಭಾಗಗಳನ್ನು ಪಂಜಾಬಿಗೆ ವರ್ಗಾಯಿಸಲು ಒತ್ತಾಯ ಮಾಡುವದಕ್ಕೆ, ಅವಶ್ಯಕ ಬಿದ್ದರೆ ಕಾಂಗ್ರೆಸ್ ಪಾರ್ಟಿ ಚಳವಳ ಹೂಡುವದೆಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹೇಳಿದರು

ಡಿಪಾಜಿಟ್ಟುಗಳು ಹೆಚ್ಚುವ ಸ್ಕೀಂಗಳು

ನವದೆಹಲಿ— ಬ್ಯಾಂಕುಗಳಲ್ಲಿ ಡಿಪಾಜಿಟ್ಟು ಶೇಕಡ 10 ರಷ್ಟು ಹೆಚ್ಚುವಂತಹ ಸ್ಕೀಂಗಳನ್ನು ತಯಾರಿಸುವಂತೆ 14 ರಾಷ್ಟ್ರೀಕರಣ ಬ್ಯಾಂಕುಗಳ ಅಧಿಕಾರಿಗಳಿಗೆ ತಿಳಿಸಲಾಗಿದೆ.

ದುರಂತ

ಮೈಸೂರು— ನಿನ್ನೆ ಮಧ್ಯರಾತ್ರಿ ಕೊತ್ವಾಲ ರಾಮಯ್ಯನವರ ಬೀದಿ ಹತ್ತಿರ ದೇವರಾಜ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಹೊಡೆದಾಟವಾಗಿ ರಾಮಕೃಷ್ಣ ಎಂಬಾತನು ತೀವ್ರ ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿ ಮೃತನಾದರೆಂದು ಗೊತ್ತಾಗಿದೆ.

ಬಾಪೂಜಿ ನಗರ

ದಾವಣಗೆರೆ— ಗಾಂಧೀಜೀಯವರ ಹೆಸರಿನಲ್ಲಿ ಬಾಪೂಜಿ ವಿದ್ಯಾ ಸಂಸ್ಥೆಯು ಬಾಪೂಜಿನಗರವೆಂಬ ಚಿಕ್ಕ ಪಟ್ಟಣ ನಿರ್ಮಿಸಲು ನಿರ್ಧರಿಸಿದೆ.

★ಬೆಂಗಳೂರು— ಕಾವೇರಿ ವರದಿ ಬಗ್ಗೆ ಶಾಸನಸಭೆಯಲ್ಲಿ ಚರ್ಚೆ ನಡೆಸಬೇಕೆಂದು ಹಲವು ಸದಸ್ಯರು ಕೇಳಿಕೆ ಹಾಕಿದರು.

ಗಾಂಧೀಜೀ ಅಮೃತವಾಣಿ

ಅಶುದ್ಧ ಸಾಧನೆಗಳು ಅಶುದ್ಧ ಫಲ ನೀಡುವುವು: ಅಸತ್ಯ ಮಾರ್ಗದಿಂದ ಯಾವನೂ ಸತ್ಯವನ್ನು ಮುಟ್ಟಲಾರನು ; ಸತ್ಯ ನಡುವಳಿಕೆಯಿಂದ ಮಾತ್ರ ಸತ್ಯವನ್ನು ತಲುಪಲು ಸಾಧ್ಯ.

ಯಾವನು ಪಾಶವೀ ಶಕ್ತಿಯನ್ನು ಪಾಶವೀಶಕ್ತಿಯಿಂದ ಎದುರಿಸಬಯಸುವನೋ ಅವನು ತನ್ನೆಲ್ಲ ನೈತಿಕ ಮತ್ತು ಭೌದ್ಧಿಕ ಶಕ್ತಿಗಳ ದಿವಾಳಿತೆಗೆದ್ದಾನೆ ಎಂದೇ ಅರ್ಥ. ಅಂತಹ ರೀತಿ ವಿಷಚಕ್ರದ ಗತಿ.

ಕ್ಷಮೆಯು ಬಲಶಾಲಿಯ ಗುಣ.

———

ಮಹಾತ್ಮಾ ಗಾಂಧಿಯವರ— ನೀತಿ ಧರ್ಮದಿಂದ

ದೇವರ ಸರ್ವಶಕ್ತಿವಂತನಾಗಿದ್ದಾನೆ : ಸಂಪೂರ್ಣನಾಗಿದ್ದಾನೆ : ಸಂಪೂರ್ಣನಾಗಿದ್ದಾನೆ : ಅವನ ಹಿರಿಮೆ, ಅವನ ದಯೆ, ಅವನ ನ್ಯಾಯ, ಇವುಗಳಿಗೆ ಮೇರೆ ಇಲ್ಲ. ಅವನ ದಾಸರು ಎಂದು ತಿಳಿಯಲ್ಪಡುವ ನಾವು, ನೀತಿಮಾರ್ಗವನ್ನು ಹೇಗೆ ಬಿಟ್ಟುಬಿಡಬಲ್ಲೆವು ? ನೀತಿಯನ್ನು ಆಚರಣೆ ಮಾಡುವವನು ವಿಫಲನಾದರೆ ಅದರಲ್ಲಿ ನೀತಿಯ ದೋಷವೇನೂ ಇಲ್ಲ : ಆದರೆ ಯಾರು ನೀತಿಯ ಭಂಗ ಮಾಡುತ್ತಾರೊ ಅವರೇ ತಮ್ಮನ್ನು ದೋಷಪೂರಿತರನ್ನಾಗಿ ಮಾಡುತ್ತಾರೆ.

ನೀತಿಯ ಮಾರ್ಗದಲ್ಲಿ, ನೀತಿಯ ಪಾಲನೆಮಾಡಿ ಅದರ ಪ್ರತಿಫಲವನ್ನು ಪ್ರಾಪ್ತ ಮಾಡಿಕೊಳ್ಳುವ ಮಾತು ಬರುವುದೇ ಇಲ್ಲ. ಮನುಷ್ಯನು ಯಾವುದೊಂದು ಉತ್ತಮ ಕೆಲಸವನ್ನು ಮಾಡುತ್ತಾನಾದರೆ ಅದು ಹೊಗಳಿಕೆಯನ್ನು ಪಡೆಯುವದಕ್ಕಾಗಿ, ಆದರೆ ಒಳ್ಳೆಯದನ್ನು ಮಾಡಿದೆ ಅವನಿಗೆ ಇರಲಾಗುವುದಿಲ್ಲ. ಆಹಾರ ಮತ್ತು ಒಳ್ಳೆಯತನವು ಮೇಲ್ತರವ ಆಹಾರವೆಂದು ಸಿದ್ಧವಾಗುವುದು ಮತ್ತು ಬೇರೆ ಯಾವ ಆದರೂ ಒಳ್ಳೆಯತನವನ್ನು ಮಾಡುವ ಅವಕಾಶಕೊಟ್ಟರೆ, ಒಳ್ಳೆಯದನ್ನು ಮಾಡುವನು ಆನಂದವನ್ನು ಕೊಡುವವನಿಗೆ, ಹಸಿದವನು ಅನ್ನಕೊಡುವವನಿಗೆ ಹರಿಸುವಂತೆ ಪ್ರತಜ್ಞನಾಗುತ್ತಾನೆ. (ಪ್ರ)

Golden Jubilee of 'Satyavadi'

The golden jubilee of the 'Satyavadi' is to be celebrat is month.

The President, the Prime Minister, H H. the Maharaja Mysore, and ot er personages have exteuded messages of felici tions and good wishes. Sri Sringeri and Sri Dwarak gadgurujis have favoured blessings and financial aid.

Rajasabha-bhushana Sri F. K. Irani, sri M.B. Basaviah ri Madhav Shenoi Sri Opera Talkies, Padmabhushana Dr. I.C. Modi, Dr. R. S. Nanjunda Swamy (Glasgow) Sri nanthanarasimha Iyengar (Honganur) have generously extend donations and best wishes.

It iswelknown that golden jubilee of newspapers in India rare and almost unknown in Mysore State. The Prime linister has expressed that it is no small achievement.

Hearty cooperation, extending of messages and donations nd gracing the occasion with presence, are fervently solicited ith grateful thanks.

Editor, 'Satyavadi' Chamarajapuram, Mysore 1.

ಪುಡ್‌ಲಾಂಡ್ಸ್ ಜಯಪ್ರದ 6 ನೇ ವಾರ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 3 ನೇ ವಾರ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ಸಪ್‌ನೋನ್ ಕ ಸೌದಾಗರ್

ನಟವರ್ಗ— ರಾಜಕಪೂರ್, ಹೇಮಮಾಲಿನಿ
ಸಂಗೀತ : ಶಂಕರ್ ಜೈಕಿಷನ್
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಶ್ಚಾತೆದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣಾರ್ಥ ಹೆಂಚಲ ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4